‘ಅತ್ತಿಗೇನೂ ಬರ್ಲಿ...’ ಎಂದು ಮೆಲ್ಲಗೆ ನುಡಿದ. ಕೃಷ್ಣೇಗೌಡನಿಗೆ ಅವನು ಮಾತನಾಡಲು ಬಂದಿರುವ ವಿಷಯದ ಬಗ್ಗೆ ತುಸು ಎಳೆ ಸಿಕ್ಕಂತಾಯಿತು. ‘ಏ ಜಯರಾಮು... ನಿಮ್ಮವ್ವನ್ನ ಕೂಗೋ...’ ಎಂದು ಅಲ್ಲಿಯೇ ನಿಂತಿದ್ದ ಮಗನಿಗೆ ಹೇಳಿದ. ಸಂಪಿಗಮ್ಮ ಒಳಗೆ ತನ್ನ ಇಬ್ಬರು ಹೆಣ್ಣುಮಕ್ಕಳೊಂದಿಗೆ ಒಬ್ಬಟ್ಟು ಮಾಡಲು ಸಿದ್ಧಮಾಡಿಕೊಳ್ಳುತ್ತಿದ್ದವಳು ‘ಅವ್ವೋ ಅಪ್ಪ ಕರೀತಾದೆ...’ ಅಂದ ಜಯರಾಮನ ದನಿ ಕೇಳಿ ಸೀರೆ ಸೆರಗು ಸರಿ ಮಾಡಿಕೊಂಡು ‘ಏನಂತೋ...’ ಅಂದು ಹೊರಗೆ ನಡುಮನೆಗೆ ಬಂದು ಗೋಡೆಗೊರಗಿ ನಿಂತಳು.

ಅತ್ತಿಗೆ ಬಂದು ನಿಂತ ಮೇಲೆ ಗಂಟಲು ಸರಿಪಡಿಸಿಕೊಂಡು ಕೇಶವ ಶುರು ಮಾಡಿದ. ‘ನಮಗೂ ಈಗ ಏನೇನೋ ತಾಪತ್ರಯ... ಸಿಟಿಯಲ್ಲಿ ಖರ್ಚು ಜಾಸ್ತಿ... ಏನೋ ಇಷ್ಟು ದಿವಸ ನಡೆಯಿತು... ಈಗ ಅಂಗಡಿಯಲ್ಲೂ ವ್ಯಾಪಾರ ಅಷ್ಟೊಂದು ಸಲೀಸಾಗಿಲ್ಲ. ಎಲ್ಲೆಲ್ಲಿಂದಲೋ ಬಂದು ಸುತ್ತಮುತ್ತ ಅಂಗಡಿ ಮಾಡವ್ರೆ...’ ಎಂದು ಪೀಠಿಕೆ ಹಾಕಿದ. ಸಂಪಿಗಮ್ಮ ಕೃಷ್ಣೇಗೌಡರಿಗೆ ಅವನು ಏನು ಹೇಳಲು ಹೊರಟಿರಬಹುದು ಎಂಬುದು ಸೂಕ್ಷ್ಮವಾಗಿ ತಿಳಿಯಿತು. ಇಂತಹದ್ದೊಂದು ಸಮಯ ಬರಬಹುದು ಎಂದು ಕೇಶವನಿಗೆ ಮಗ ಹುಟ್ಟಿದ ದಿನವೇ ಅವರಿಬ್ಬರೂ ಅಂದುಕೊಂಡಿದ್ದರು.

★★★

ಹತ್ತು ವರ್ಷಗಳ ಹಿಂದೆಯೂ ಕೇಶವ ಹೀಗೆಯೇ ಒಂದು ಮುಖ್ಯ ವಿಷಯವನ್ನು ಅಣ್ಣ ಅತ್ತಿಗೆಯೊಂದಿಗೆ ಮಾತನಾಡಲು ಬೆಂಗಳೂರಿನಿಂದ ಊರಿಗೆ ಬಸ್ಸು ಹತ್ತಿ ಬಂದಿದ್ದ. ಆದರೆ ಈ ಬಾರಿಯಂತೆ ಒಬ್ಬನೇ ಬಂದಿರಲಿಲ್ಲ. ಜೊತೆಗೆ ಅವನ ಹೆಂಡತಿ ಲಕ್ಷ್ಮಿಯೂ ಬಂದಿದ್ದಳು.

ಕೃಷ್ಣೇಗೌಡ, ಸಂಪಿಗಮ್ಮನವರಿಗೆ ಒಟ್ಟು ನಾಲ್ಕು ಮಕ್ಕಳು. ಮೂರು ಹೆಣ್ಣು, ಒಂದು ಗಂಡು. ಅವರಲ್ಲಿ ಸುಶೀಲ, ಸಾವಿತ್ರಿ ಆದ ಮೇಲೆ ಹುಟ್ಟಿದವಳು ಸುನಂದಾ. ಆಗ ಮೂರು ವರ್ಷದ ಕೂಸು. ಅವಳ ನಂತರ ಹುಟ್ಟಿದ ಜಯರಾಮ ಆರು ತಿಂಗಳ ಚಿಕ್ಕಮಗು. ವ್ಯವಸಾಯ ಮನೆಮಂದಿಯೆಲ್ಲಾ ಸಾಯ ಎಂದುಕೊಂಡು ಕೃಷಿಯಲ್ಲಿ ಎಷ್ಟೇ ಮೈಬಗ್ಗಿಸಿ ದುಡಿದರೂ ತಕ್ಕ ಆದಾಯವಿಲ್ಲವೆಂಬುದನ್ನು ಅರಿತು ಎಸ್ಸೆಸ್ಸೆಲ್ಸಿ ಫೇಲಾಗಿದ್ದ ಕೇಶವ ಕೆಲಸ ಹುಡುಕಿಕೊಂಡು ಹೋಗಿ ಬೆಂಗಳೂರು ಬಿದ್ದಿದ್ದ. ಕೆಂಗೇರಿಯಲ್ಲಿ ಒಂದು ದಿನಸಿ ಅಂಗಡಿಯಲ್ಲಿ ಸಹಾಯಕನಾಗಿ ಕೆಲಸ ಮಾಡುತ್ತಿದ್ದ. ಮೂರು ವರ್ಷಗಳ ನಂತರ ವ್ಯಾಪಾರದ ಗುಟ್ಟುಗಳನ್ನು ಅರಿತುಕೊಂಡು, ಹೇಗೇಗೋ ಮಾಡಿ ಬಂಡವಾಳ ಹೊಂದಿಸಿ ತಾನೇ ಒಂದು ಸಣ್ಣ ಅಂಗಡಿಯನ್ನು ತೆರೆದಿದ್ದ. ಗಿರಾಕಿಗಳೊಂದಿಗೆ ನಗುನಗುತ್ತಲೇ ಬಾಯಿತುಂಬಾ ಮಾತನಾಡುವ ಚಾಲಾಕಿತನವನ್ನು ಅರಿತಿದ್ದ ಕೇಶವನಿಗೆ ವ್ಯಾಪಾರ ಮಾಡುವ ಕಲೆಯೂ ಕರಗತವಾಗಿತ್ತು. ಇದರಿಂದಾಗಿ ಕೆಲವೇ ದಿನಗಳಲ್ಲಿ ತನ್ನ ಕಾಲ ಮೇಲೆ ತಾನು ನಿಂತುಕೊಳ್ಳುವಷ್ಟು ಆರ್ಥಿಕವಾಗಿ ಸಬಲನಾಗಿದ್ದ. ಬೆಂಗಳೂರಿನಲ್ಲಿದ್ದ ಸಂಬಂಧಿಕರೊಬ್ಬರ ಹೆಣ್ಣುಮಗಳು ಪಿಯುಸಿಯವರೆಗೆ ಓದಿದ್ದ ಲಕ್ಷ್ಮಿ ಕೇಶವನ ಕೈಹಿಡಿದಿದ್ದಳು. ಸಂಸಾರ ಮತ್ತು ವ್ಯಾಪಾರ ಎರಡರಲ್ಲೂ ಚತುರಮತಿಯಾಗಿದ್ದ ಲಕ್ಷ್ಮಿ ಕೇಶವನ ಜೊತೆಯಾದ ಮೇಲೆ ಅವನು ಆರ್ಥಿಕವಾಗಿ ಇನ್ನಷ್ಟು ಸದೃಢನಾಗಿದ್ದ. ಆದರೆ, ಮದುವೆಯಾಗಿ ಐದು ವರ್ಷಗಳು ಕಳೆದರೂ ಮಕ್ಕಳಾಗಲಿಲ್ಲವೆಂಬ ಚಿಂತೆ ಅವರಿಬ್ಬರನ್ನೂ ಇನ್ನಿಲ್ಲದಂತೆ ಕಾಡತೊಡಗಿತ್ತು. ಕಂಡ ಕಂಡ ದೇವರಿಗೆ ಹರಕೆ ಹೊತ್ತಿದ್ದಾಯಿತು, ಬೆಂಗಳೂರಿನ ಪ್ರಮುಖ ಜ್ಯೋತಿಷಿಗಳ ಸಲಹೆಯಂತೆ ಹಲವಾರು ಪೂಜೆ ಪುನಸ್ಕಾರ ಮಾಡಿಸಲಾಯಿತು. ಯಾವುದೂ ಫಲ ನೀಡಲಿಲ್ಲ. ಕೊನೆಗೆ ಗಂಡ ಹೆಂಡತಿ ಇಬ್ಬರೂ ವೈದ್ಯಕೀಯ ಪರೀಕ್ಷೆಗೆ